## ಪ್ರಧಾನ ಸಿವಿಲ್ ನ್ಯಾಯಾಧೀಶರು, ಮಂಗಳೂರು, ದಕ್ಷಿಣ ಕನ್ನಡ.

ದಿಃ 11.08.2026 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರವಾಗಿ,**

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತದೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ನಾನು ನನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

1. ದಿನಾಂಕ 13.01.2014 ರ ಕ್ರಯಪತ್ರದ ಡಿಜಿಟಲ್ ಪ್ರತಿಯನ್ನು ನಿಪಿ–1 ಎಂದು,
2. ದಿನಾಂಕ 25.10.2022 ರ ಕ್ರಯಪತ್ರದ ಡಿಜಿಟಲ್ ಪ್ರತಿಯನ್ನು ನಿಪಿ–2 ಎಂದು,
3. ದಿನಾಂಕ 27.09.2023 ರ memorandum relating to deposit of title deeds ನ್ನು ನಿಪಿ–3 ಎಂದು,
4. ಆಸ್ತಿ ತೆರಿಗೆಯ ರಶೀದಿಯ ಡಿಜಿಟಲ್ ಪ್ರತಿಯನ್ನು ನಿಪಿ–4 ಎಂದು,
5. ವಿದ್ಯುತ್ ಬಿಲ್ ನ್ನು ನಿಪಿ–5 ಎಂದು,
6. EC ಯ ಡಿಜಿಟಲ್ ಪ್ರತಿಯನ್ನು ನಿಪಿ–6 ಎಂದು,
7. ಪೋಲಿಸರು ನೀಡಿದ ಸ್ವೀಕೃತಿಯನ್ನು ನಿಪಿ–7 ಮತ್ತು ನಿಪಿ–8 ಎಂದು,
8. ವಿದ್ಯುತ್ ಬಿಲ್ ನ್ನು ನಿಪಿ–9 ಎಂದು,
9. ದಿನಾಂಕ 09.10.2025 ರಂದು ಸಾರ್ವಜನಿಕ ಮಾಹಿತಿ ಅಧಿಕಾರಿ ನೀಡಿದ ಮಾಹಿತಿಯನ್ನು ಎದುರುದಾರ ವಕೀಲರ ಮೌಖಿಕ ತಕರಾರಿನೊಂದಿಗೆ ನಿಪಿ–10 ಎಂದು,

10. ದಿನಾಂಕ 10.10.2025 ರಂದು ಸಾರ್ವಜನಿಕ ಮಾಹಿತಿ ಅಧಿಕಾರಿ ನೀಡಿದ ಮಾಹಿತಿಯನ್ನು ಎದುರುದಾರ ವಕೀಲರ ಮೌಖಿಕ ತಕರಾರಿನೊಂದಿಗೆ ನಿಪಿ–11 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮಂಗಳೂರು.